



## ಪಥ್ಯ ಎಂದರೇನು?

ಆಯುರ್ವೇದ ಚಿಕಿತ್ಸೆ ಎಂದ ತಕ್ಷಣ ಎಲ್ಲರೂ ಮೊಟ್ಟಮೊದಲ ಯೋಚಿಸುವ ಒಂದೇ ಅಂಶ ಪಥ್ಯ ಮತ್ತು ಅಪಥ್ಯ. ಆಯುರ್ವೇದ ಚಿಕಿತ್ಸೆ ಎಂದರೆ ಜನರು ಹಿಂಜರಿಯುವುದಕ್ಕೆ ಮುಖ್ಯ ಕಾರಣ ಈ ಪಥ್ಯ. ಈ ಪಥ್ಯದ ವಿಚಾರ ಎಷ್ಟು ಬೇರೂರಿದೆ ಎಂದರೆ, 'ಅಯ್ಯೋ ಬಿಡು, ಈ ಪಥ್ಯಗಿಥ್ಯ ಅಂತ ಅವರು ಕೊಡೋ ಚೂರ್ಣ ಲೇಹ್ಯಗಳನ್ನು ಯಾರು ತಗೋತಾರೆ' ಎಂದು ಕೇಳುವವರೇ ಹೆಚ್ಚು.

ಹಾಗಾದರೆ ಈ ಪಥ್ಯ ಅಪಥ್ಯ ಎಂದರೇನು?

ಪಥ್ಯಂ ಚ ಅಪಥ್ಯಂ ಚ ತಯಾಃ ಸಮಾಹಾರಃ ಪಥ್ಯಾಪಥ್ಯಃ

ಪಥ್ಯಾಪಥ್ಯ ಶಬ್ದವು, ಪಥ್ಯ ಮತ್ತು ಅಪಥ್ಯ ಎಂಬ ಎರಡು ಶಬ್ದಗಳಿಂದ ಕೂಡಿದೆ. ಇವೆರಡೂ ವಿರುದ್ಧಾರ್ಥ ಹೊಂದಿವೆ. ಪಥಿಃ ಸಾಧುಃ ಪಥ್ಯಃ ನಮ್ಮ ಜೀವನದಾರಿಗೆ ಪೂರಕವಾದುದ್ದೇ ಪಥ್ಯ. ಯಾವ ಆಹಾರ ಸೇವನೆಯಿಂದ ಶರೀರ ಮತ್ತು ಮನಸ್ಸಿನಲ್ಲಿ ಯಾವುದೇ ವಿಧದ ಕೆಟ್ಟ ಬದಲಾವಣೆಯಾಗುವುದಿಲ್ಲವೋ, ಯಾವುದು ಶರೀರಕ್ಕೆ ಹಿತವೋ, ಸುಖ ಸಂತೋಷವನ್ನುಂಟು ಮಾಡುತ್ತದೋ ಅದುವೇ ಪಥ್ಯ, ಶರೀರಕ್ಕೆ ತೊಂದರೆಯನ್ನುಂಟು ಮಾಡುವುದೇ ಅಪಥ್ಯ. ಅಪಥ್ಯವೂ ಕೆಲವು ಬಾರಿ ಸ್ವಲ್ಪ ಪ್ರಮಾಣದಲ್ಲಿ ಉಪಯೋಗಿಸಿದ ಕೆಲವು ದಿನಗಳ ನಂತರ ಸಾತ್ಮ್ಯವಾಗಿ ಅಂದರೆ ಶರೀರಕ್ಕೆ ಒಗ್ಗಿಕೊಂಡು ಪಥ್ಯವಾಗುವುದಿದೆ.

ಆದರೆ ಜನಸಾಮಾನ್ಯರು ಆಹಾರಕ್ರಮಕ್ಕೆ ಮಾತ್ರ ಸೀಮಿತವಾಗಿಸಿಕೊಂಡು, 'ಆಯುರ್ವೇದ ವೈದ್ಯರು ಅದು ತಿನ್ನಬೇಡ, ಇದು ತಿನ್ನಬೇಡ ಎಂದು ತುಂಬ ನಿರ್ಬಂಧಿಸುತ್ತಾರೆ' ಎಂದು ಭಾವಿಸಿದ್ದಾರೆ. ಯಾವುದೇ ಕಾಯಿಲೆಗೆ ಔಷಧಿ ನೀಡಿದಾಗ ಅದಕ್ಕೆ ಪೂರಕವಾದ ಆಹಾರವನ್ನು ಎಲ್ಲ ವೈದ್ಯರೂ ಸಾಮಾನ್ಯವಾಗಿ ಸೂಚಿಸುತ್ತಾರೆ. ಅಸಿಡಿಟಿ

## ಯಾರು ವೈದ್ಯರು?

ಆಯುರ್ವೇದ ವೈದ್ಯರಿಗೆ ಮೊದಲು ಆರ್.ಎಂ.ಪಿ. ಲೈಸೆನ್ಸ್ ನೀಡಲಾಗುತ್ತಿತ್ತು. ಆದರೆ ೧೯೮೧ರಿಂದ ಅದನ್ನು ಸ್ಥಗಿತಗೊಳಿಸಲಾಗಿದೆ. ಈಗಲೂ ಯಾರಾದರೂ ಆರ್.ಎಂ.ಪಿ. ಸರ್ಟಿಫಿಕೇಟ್‌ನಿಂದ ವೃತ್ತಿಯಲ್ಲಿದ್ದರೆ, ಅದು ಇನ್ಯಾರದೋ ಹೆಸರಿನಲ್ಲಿ ಇದ್ದಿರಬಹುದು. (ಅವರು ತೀರಿಕೊಂಡ ನಂತರ ಮತ್ತಾರೋ ಅದನ್ನು ಬಳಸುತ್ತಿರಬಹುದು.) ಈಗ ಇಡೀ ದೇಶದಾದ್ಯಂತ ಬಿ.ಎ.ಎಂ.ಎಸ್ ಡಿಗ್ರಿ ಪಡೆದವರು ಮಾತ್ರ ಆಯುರ್ವೇದ ವೈದ್ಯ ವೃತ್ತಿ ನಡೆಸಲು ಅರ್ಹತೆ ಪಡೆದಿರುತ್ತಾರೆ. ಪದವಿ ಪೂರೈಸಿದ ನಂತರ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯಲ್ಲಿ ನೋಂದಣಿ ಹೊಂದಿರಬೇಕು.

